ಕರ್ನಾಟಕ ವಿಧಾನಸಭೆ

ಬುಧವಾರ 26ನೇ ಮಾರ್ಚ್ 2003ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.

I. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಕರ್ನಾಟಕ ಗೃಹ ಮಂಡಳಿಯ ನೂರು ವಸತಿ ಯೋಜನೆ ಕಾರ್ಯಕ್ರಮ

253(2173) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಗೃಹ ಮಂಡಳಿಯ 100 ಸ್ಥಳಗಳಲ್ಲಿ ವಸತಿ ಸಮುದಾಯ ಸ್ಥಾಪಿಸುವ ಕಾರ್ಯಕ್ರಮ ಯಾವ ಹಂತದಲ್ಲಿದೆ;

ಆ) ಎಷ್ಟು ಸ್ಥಳಗಳಲ್ಲಿ ಈ ಕಾರ್ಯಕ್ರಮ ಪ್ರಾರಂಭ ಮಾಡಲಾಗಿದೆ;

ಇ) 100 ವಸತಿ ಯೋಜನೆ ಕಾರ್ಯಕ್ರಮ ಬೀಳಗಿ ತಾಲ್ಲೂಕಿಗೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಆದರೆ, ಫಲಾನುಭವಿಗಳಿಗೆ ಯಾವುದೇ ಮಾಹಿತಿ ನೀಡದೆ ಮುಂಗಡ ಹಣ ಕಟ್ಟಲು ಸೂಚಿಸಿರುವುದು ನಿಜವೇ;

ಉ) ಫಲಾನುಭವಿಗಳಿಗೆ ಮಾಹಿತಿ ಕೊಡದೇ ಇರಲು ಕಾರಣಗಳೇನು;

ಊ) ಬೀಳಗಿಯಲ್ಲಿ ಈ ಯೋಜನೆ ಪ್ರಾರಂಭಿಸಲು ಇರುವ ತೊಂದರೆಗಳೇನು?

ಶ್ರೀ ಸಿ.ಆರ್.ಸಗೀರ್ ಅಹ್ಮದ್(ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿಯ ಉದ್ದೇಶಿತ 100 ವಸತಿ ಯೋಜನೆಯಡಿಯಲ್ಲಿ 53 ಸ್ಥಳಗಳಲ್ಲಿ ಈಗಾಗಲೇ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಉಳಿದ ಸ್ಥಳಗಳಿಗೆ ವಿವರವಾದ ಯೋಜನಾ ವರದಿಗಳನ್ನು ತಯಾರಿಸುವ / ಅಂತಿಮಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

ಆ) ಈಗಾಗಲೇ 53 ಸ್ಥಳಗಳಲ್ಲಿ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು.

ಈ) ನಿಜವಲ್ಲ, ಕರ್ನಾಟಕ ಗೃಹ ಮಂಡಳಿಯು ತನ್ನ 100 ವಸತಿ ಯೋಜನೆಯಡಿಯಲ್ಲಿ ಬಾಗಲಕೋಟೆಯ ಬೀಳಗಿ ತಾಲ್ಲೂಕಿನಲ್ಲಿ ವಸತಿ ಯೋಜನೆಯನ್ನು ತೆಗೆದುಕೊಳ್ಳುವ ಸಲುವಾಗಿ ಸ್ಥಳೀಯ ಪತ್ರಿಕೆಯಲ್ಲಿ ದಿನಾಂಕ:22.2.2002 ರಂದು ಅಧಿಸೂಚನೆ ಹೊರಡಿಸಿ ಸಾರ್ವಜನಿಕರಿಂದ ಎಲ್.ಐ.ಜಿ. ಎಂ.ಐ.ಜಿ. ಹೆಚ್.ಐ.ಜಿ ಮನೆಗಳನ್ನು ಹಂಚಿಕೆ ಮಾಡುವ ಸಲುವಾಗಿ ನೋಂದಾಯಿಸಲು ಕರೆ ನೀಡಲಾಯಿತು. ಆದರಂತೆ 136 ಅರ್ಜಿಗಳು ಮಂಡಳಿಯಲ್ಲಿ ಸ್ವೀಕೃತವಾಗಿ ನೋಂದಾಯಿಸಲಾಯಿತು. ಬೇಡಿಕೆಯನ್ನು ಖಚಿತಪಡಿಸಲು ವೈಯಕ್ತಿಕ ಪತ್ರಗಳನ್ನು 136

ಅರ್ಜಿದಾರರಿಗೂ ದಿನಾಂಕ:28.8.2002 ರಂದು ಕಳುಹಿಸಲಾಯಿತು. ಯೋಜನೆಗೆ ನಿರ್ದಿಷ್ಟ ಬೇಡಿಕೆಯನ್ನು ಪಡೆಯುವ ಸಲುವಾಗಿ ಅರ್ಜಿದಾರರಿಗೆ ನಿವೇಶನಕ್ಕೆ ರೂ.20.000/- ಮತ್ತು ಮನೆಗೆ ರೂ.40,000/- ಗಳನ್ನು ಸಂದಾಯ ಮಾಡಲು ತಿಳಿಸಲಾಯಿತು. ಆದರೆ ಇದುವರೆಗೂ ಯಾವ ಅರ್ಜಿದಾರರು ಆರಂಭಿಕ ಠೇವಣಿಯನ್ನು ಸಂದಾಯ ಮಾಡಿರುವುದಿಲ್ಲ.

ಉ) ಈಗ ನೀಡಿರುವ ಉತ್ತರ ಅನ್ವಯಿಸುತ್ತದೆ.

ಊ) ಉದ್ದೇಶಿತ ಯೋಜನೆಗೆ ನಿರೀಕ್ಷಿತ ಬೇಡಿಕೆ ಇಲ್ಲದಿರುವುದರಿಂದ ಯೋಜನೆಯನ್ನು ಪ್ರಾರಂಭಿಸಲಾಗಿಲ್ಲ.

ಅನುಬಂಧ

ಕರ್ನಾಟಕ ಗೃಹ ಮಂಡಳಿ

ಕಾರ್ಯಗತಿಯಲ್ಲಿರುವ 100 ವಸತಿ ಯೋಜನೆಗಳ ಪಟ್ಟಿ

ಸಂಖ್ಯೆ	ಪ್ಯಾಕೇಜ್ ಸ್ಥಳ	ಹೆಸರು	ನಿವೇಶನಗಳ ಸಂಖ್ಯೆ	ಮನೆಗಳ ಸಂಖ್ಯೆ
1	2	3	4	5
1.	ಚಿಕ್ಕಮಂಡ್ಯ	ಮಂಡ್ಯ-ಮೈಸೂರು	1169	179
2.	ಮಂಡ್ಯ ನಗರ		12	47
3.	ಹರಪನಹಳ್ಳಿ	ದಾವಣಗೆರೆ-ಶಿವಮೊಗ್ಗ	51	35
4.	ಜಗಳೂರು		62	11
5.	ಸಾಗರ		51	16
6.	ಅಸ್ಕಿಹಾಳ	ರಾಯಚೂರು	166	47
7.	ಸಿಂಧನೂರು		20	24
8.	ಕುವೆಂಪುನಗರ-1	ಬಳ್ಳಾರಿ	16	0
9.	ತಿಲಕನಗರ		9	22
10.	ಹೊಸಪೇಟೆ		6	14
11.	ನವಬಾದ್	ಬೀದರ್	102	165
12.	ಚಿತ್ತಗುಪ್ಪ		12	10
13.	ಲಂಡಕನಹಳ್ಳಿ	ಧಾರವಾಡ-ಉತ್ತರ ಕನ್ನಡ	152	25
14.	ಸಂತೋಷನಗರ	ಗದಗ	3	11
15.	ಗದಗ		25	323
16.	ಕಂಕನಾಡಿ	ದಕ್ಷಿಣ ಕನ್ನಡ-ಉಡುಪಿ	35	170
17.	ಕುಂಜತ್‌ಬೈಲ್		23	70
18.	ಪದುವು-ಮಂಗಳೂರು		19	40
19.	ಉಳ್ಳಾಳ ಸೋಮೇಶ್ವರ		75	0
20.	ಕುಂಭಾಶಿ		27	2
21.	ಜಮಂಖಿಡಿ	ಬಾಗಲಕೋಟೆ-ಬಿಜಾಪುರ	339	53
22.	ಹಂಚಿನಾಳ		87	76

1	2	3	4	5
23.	ಸರ್ವೆ ನಂ. 528	ಚಿಕ್ಕಮಗಳೂರು	111	0
24.	ಜಿ.ಎಲ್.ಎಸ್.ಆರ್.ಲ್ಯಾಂಡ್		27	0
25.	5ನೇ ಹಂತ		663	0
26.	ಕೊಪ್ಪ		83	0
27.	ಹೊಳಲ್ಕೆರೆ	ಚಿತ್ರದುರ್ಗ	60	0
28.	ಹೊಸದುರ್ಗ		338	0
29.	ಕೆಳಕೋಟೆ		418	0
30.	ತುಮಕೂರು ಪಟ್ಟಣ	ಬೆಂಗಳೂರು (ಗ್ರಾ)-ತುಮಕೂರು	12	32
31.	ಗದಗ-ಕೆ.ಎಸ್.ಆರ್.ಟಿ.ಸಿ	ಗದಗ	7	263
32.	ಸತ್ತೂರು ಲೇಔಟ್	ಧಾರವಾಡ	0	4
33.	ಬಿಜಾಪುರ (ಕ.ಗೃ.ಮಂ.ಜಮೀನು)	ಬಿಜಾಪುರ	ವಾಣಿಜ್ಯ ಸಂಕೀರ್ಣ	
34.	ನಿಟ್ಟುವಳ್ಳಿ (ಕ.ಗೃ.ಮಂ.ಜಮೀನು)	ದಾವಣಗೆರೆ	ವಾಣಿಜ್ಯ ಸಂಕೀರ್ಣ	
35.	ಗೋಪಿಶೆಟ್ಟಿಕೊಪ್ಪ	ಶಿವಮೊಗ್ಗ	466	155
36.	ನಿಪ್ಪಾಣಿ	ಬೆಳಗಾಂ	80	49
37.	ಸಂಕೇಶ್ವರ		43	87
38.	ಇಂಡಿ	ಬಿಜಾಪುರ	117	12
39.	ಹಳಿಯಾಳ	ಉತ್ತರ ಕನ್ನಡ	100	0
40.	ಟಿ.ನರಸೀಪುರ	ಮೈಸೂರು	0	114
41.	ಆಲೂರು	ಹಾಸನ	46	0
42.	ಅಥಣಿ	ಬೆಳಗಾಂ	233	0
43.	ಅರಕಲಗೂಡು	ಹಾಸನ	44	0
44.	ಮುದ್ದೇಬಿಹಾಳ	ಬಿಜಾಪುರ	96	250
45.	ಕನಬರ್ಗಿ	ಬೆಳಗಾಂ	543	4
46.	ಗಾಮನಗಟ್ಟಿ	ಧಾರವಾಡ	725	80
47.	ಮರಳೂರು	ತುಮಕೂರು	527	0
48.	ಭದ್ರಾವತಿ	ಶಿವಮೊಗ್ಗ	73	0
49.	ಲಕ್ಷ್ಮೇಶ್ವರ	ಗದಗ	170	0
50.	ಹೆಬ್ರಿ	ಉಡುಪಿ	0	15
51.	ತಿರುವೈಲ್	ದಕ್ಷಿಣ ಕನ್ನಡ-ಉಡುಪಿ	94	0
52.	ಶಿವಳ್ಳಿ		53	0
53.	ಹುಮನಾಬಾದ್	ಬೀದರ್	94	0
			7684	**2405**

ಶ್ರೀ ಜೆ.ಟಿ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಯಾವುದೇ ನಿರೀಕ್ಷಿತ ಬೇಡಿಕೆ ಇಲ್ಲದೇ ಇರುವುದರಿಂದ ಯೋಜನೆಗಳನ್ನು ಪ್ರಾರಂಭಿಸಲಾಗಿಲ್ಲ ಎಂದು ಹೇಳಿದ್ದಾರೆ. 136 ಅರ್ಜಿದಾರರುಗಳ ಪೈಕಿ ನಾನೂ ಒಬ್ಬ ಅರ್ಜಿದಾರನಾಗಿದ್ದು, ಈವರೆಗೆ

ನನಗೇ ಯಾವುದೇ ಮಾಹಿತಿ ಗೃಹ ಮಂಡಳಿಯಿಂದ ಬಂದಿಲ್ಲ. ಇದರ ಜೊತೆಗೆ ಎಲ್.ಐ.ಜಿ. ಇರಬಹುದು, ಹೆಚ್.ಐ.ಜಿ. ಇರಬಹುದು ಅಥವಾ ಎಂ.ಐ.ಜಿ. ಇರಬಹುದು, ಈ ಮನೆಗಳನ್ನು ಪಟ್ಟಣದಲ್ಲಿ ಕಟ್ಟುವುದಕ್ಕೆ ಕಿಮ್ಮತ್ತು ಎಷ್ಟಾಗುತ್ತದೆ ಎನ್ನುವ ಬಗ್ಗೆ ನಮ್ಮ ಭಾಗದ ಜನರು ಮಾಹಿತಿ ಕೇಳಿದ್ದರು. ಆದರೆ ಈ ಬಗ್ಗೆ ಯಾವುದೇ ಮಾಹಿತಿಯನ್ನು ಒದಗಿಸಿಲ್ಲ. ಈ ಬಗ್ಗೆ ಮಾಹಿತಿಯನ್ನು ಒದಗಿಸಿದರೆ ನೂರಕ್ಕೆ ನೂರರಷ್ಟು ಫಲಾನುಭವಿಗಳು ಹಣವನ್ನು ತುಂಬುವುದಕ್ಕೆ ತಯಾರಿದ್ದಾರೆ. ಆದಕಾರಣ, ನೀವು ಮಾಹಿತಿಯನ್ನು ಒದಗಿಸಿದ ಬಳಿಕ ಅರ್ಜಿದಾರರು ಹಣವನ್ನು ತುಂಬಿದ ಮೇಲೆ ಎಷ್ಟು ದಿನಗಳೊಳಗೆ ಈ ಯೋಜನೆಯನ್ನು ಬೀಳಗಿ ಪಟ್ಟಣದೊಳಗೆ ಪ್ರಾರಂಭಿಸಲಾಗುವುದು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ವಸತಿ ಇಲಾಖೆಯು ನೂರು ಮನೆ ಯೋಜನೆಯಡಿಯಲ್ಲಿ ನೂರು ಯೋಜನೆಗಳನ್ನು ಹಮ್ಮಿಕೊಳ್ಳುವಂಥದ್ದರ ಬಗ್ಗೆ ವಸತಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ. ಈಗ ಮಾನ್ಯ ಶಾಸಕರ ಕ್ಷೇತ್ರದಲ್ಲೂ ಕೂಡ ಈ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಆಲೋಚನೆ ಮಾಡಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಕೊಡುವುದರ ಮೂಲಕ ಇದರ ಅಗತ್ಯತೆ ಇದೆಯೇ, ಬೇಡಿಕೆ ಇದೆಯೇ, ಸಾರ್ವಜನಿಕರು ಈ ಬೇಡಿಕೆ ಬಗ್ಗೆ ಸ್ಪಂದಿಸುತ್ತಾರೆಯೇ ಎನ್ನುವುದರ ಬಗ್ಗೆ ನಾವು ಮಾಧ್ಯಮದ ಮೂಲಕ ಈ ಕ್ಷೇತ್ರಗಳಲ್ಲಿ ಜಾಹೀರಾತು ಕೊಟ್ಟು ಈಗಾಗಲೇ ಕೆಲವು ಅರ್ಜಿಗಳನ್ನು ನಾವು ಸ್ವೀಕಾರ ಮಾಡಿದ್ದೇವೆ. ಒಟ್ಟು 136 ಅರ್ಜಿಗಳು ನಮಗೆ ತಲುಪಿವೆ. ಆದರೆ ಅರ್ಜಿ ಸಲ್ಲಿಸಿದ ನಂತರ ಮುಂಗಡ ಹಣವನ್ನು ಪಾವತಿ ಮಾಡಬೇಕು ಎನ್ನುವುದರ ಬಗ್ಗೆ ಅರ್ಜಿದಾರರಿಗೆ ಪತ್ರ ಬರೆಯುವುದರ ಮೂಲಕ, ತಿಳುವಳಿಕೆ ಕೊಟ್ಟಿದ್ದರೂ ಕೂಡ ಇದುವರೆಗೆ ಯಾರೂ ಮುಂಗಡ ಹಣವನ್ನು ಪಾವತಿ ಮಾಡುವುದಕ್ಕೆ ಮುಂದೆ ಬರಲಿಲ್ಲ. ಶಾಸಕರು ಈಗ ಇಲ್ಲಿ ಹೇಳುತ್ತಿದ್ದಾರೆ. ಅಲ್ಲಿ ಹೆಚ್ಚಾಗಿ ಬೇಡಿಕೆ ಇದೆಯೆಂದಿದ್ದಾರೆ. ಆದುದರಿಂದ ನಾನು ತಮ್ಮ ಮೂಲಕ ಮಾನ್ಯ ಶಾಸಕರಿಗೆ ತಿಳಿಸುವುದೇನೆಂದರೆ, ಹೆಚ್ಚಾಗಿ ಮನೆಗಳ, ನಿವೇಶನಗಳ ಬೇಡಿಕೆ ಇದೆ ಎನ್ನುವುದಾದರೆ ಅಲ್ಲಿಯ ಫಲಾನುಭವಿಗಳನ್ನು ನಮ್ಮ ಇಲಾಖೆಗೆ ಅರ್ಜಿ ಕೊಡುವುದರ ಮುಖಾಂತರ ಮುಂಗಡ ಹಣವನ್ನು ಅವರು ಪಾವತಿಸಿದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತೇನೆ. ಕಾರಣ ಏನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣಾರವರ ನೇತೃತ್ವದ ಸರ್ಕಾರದಲ್ಲಿ ರಾಜ್ಯದಾದ್ಯಂತ ನೂರು ವಸತಿ ಯೋಜನೆಗಳನ್ನು 800 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಮುಖಾಂತರ ಯೋಜನೆಯನ್ನು ಯಶಸ್ವಿಗೊಳಿಸಬೇಕು, ಸಾರ್ವಜನಿಕರ ಬೇಡಿಕೆಯಂತೆ, ಗೃಹ ಮಂಡಳಿಗೆ ಒಳ್ಳೆಯ ಹೆಸರು ಬರುವಂಥ ನಿರೀಕ್ಷೆಯ ಆಧಾರದ ಮೇಲೆ ಈ ಫಲಾನುಭವಿಗಳ ಬೇಡಿಕೆ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಜಾರಿಗೊಳಿಸಲು ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಶಾಸಕರು ಹೇಳಿದಂತೆ, ಆ ಭಾಗದ ಜನಗಳಿಗೆ ಮನೆಗಳ, ನಿವೇಶನಗಳ ಅಗತ್ಯತೆ ಇದೆ ಎನ್ನುವುದರ ಬಗ್ಗೆ ಸಂಪೂರ್ಣವಾದಂಥ ಬೆಂಬಲವನ್ನು ವ್ಯಕ್ತಪಡಿಸಿದರೆ, ತಕ್ಷಣವೇ ಈ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ನಾನು ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಜೆ.ಟಿ.ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಸಚಿವರಲ್ಲಿ ಕೇಳುವುದೇವೆಂದರೆ, ನಾನೂ ಒಬ್ಬ ಅರ್ಜಿದಾರನಾಗಿದ್ದು, ಇಲ್ಲಿಯವರೆಗೂ ಮನೆ ಕಟ್ಟಲು ಆಗಬಹುದಾದ ಕಿಮ್ಮತ್ತು ಎಷ್ಟು ಎಂಬ ಮಾಹಿತಿ ಸಿಕ್ಕಿಲ್ಲ. ಈಗ ನಾವು ಮುಂಗಡ ಹಣ ಕಟ್ಟಿದ ಮೇಲೆ ಆ ನಂತರದಲ್ಲಿ

ಒಂದು ಮನೆಗೆ ಹತ್ತು ಲಕ್ಷವೋ, ಹದಿನೈದು ಲಕ್ಷವೋ ಆಗುತ್ತದೆ ಎಂದು ಹೇಳಿದರೆ ಆಗ ಅದನ್ನು ತೆಗೆದುಕೊಳ್ಳಬೇಕೋ, ಬೇಡವೋ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಆದುದರಿಂದ ದಯಮಾಡಿ ಮಾನ್ಯ ಸಚಿವರಲ್ಲಿ ನಾನು ಕೇಳುವುದೇನೆಂದರೆ, ಬೀಳಗಿ ಪಟ್ಟಣದಲ್ಲಿ ಎಲ್.ಐ.ಜಿ., ಎಂ.ಐ.ಜಿ. ಹಾಗೂ ಹೆಚ್.ಐ.ಜಿ. ಮನೆಗಳನ್ನು ನಿರ್ಮಾಣ ಮಾಡಲು ಎಷ್ಟು ವೆಚ್ಚ ಬರಬಹುದು ಎಂಬ ಬಗ್ಗೆ ಮಾಹಿತಿಯನ್ನು ಜನರಿಗೆ ಕೊಟ್ಟರೆ ನಮ್ಮಲ್ಲಿ ನೂರಕ್ಕೆ ನೂರರಷ್ಟು ಹಣವನ್ನು ತುಂಬುವುದಕ್ಕೆ ತಯಾರಿದ್ದಾರೆ. ಆದಕಾರಣ ಇದನ್ನು ತಾವು ಪರಿಗಣಿಸಿ ಮನೆಯ ಕಿಮ್ಮತ್ತನ್ನು ಕಟ್ಟಿದ ಬಳಿಕ ಎಷ್ಟು ದಿವಸದಲ್ಲಿ ಈ ಯೋಜನೆಯನ್ನು ಅಲ್ಲಿ ಪ್ರಾರಂಭ ಮಾಡುತ್ತೀರಿ ಹಾಗೂ ಈ ಯೋಜನೆಯ ವೆಚ್ಚ ಎಷ್ಟು ಎಂಬ ಬಗ್ಗೆ ಮಾಹಿತಿಗಳನ್ನು ಆದಷ್ಟು ಬೇಗನೇ ಕಳುಹಿಸಿಕೊಡುತ್ತೀರಾ ಎಂಬ ಬಗ್ಗೆ ನಾನು ಮತ್ತೊಮ್ಮೆ ಮಾನ್ಯ ಸಚಿವರಿಗೆ ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಪಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ರಾಜ್ಯದಾದ್ಯಂತ ಭಿನ್ನಭಿನ್ನವಾದಂಥ ಬೆಲೆಗಳು ಜಮೀನಿಗೆ ಇದೆ. ಇವರ ಕ್ಷೇತ್ರದಲ್ಲಿ ಅಥವಾ ಇವರ ತಾಲ್ಲೂಕಿನಲ್ಲಿ ಜಮೀನಿನ ಬೆಲೆ, ಅದಕ್ಕೆ ತಕ್ಕಂತೆ ನಾವು ಅಭಿವೃದ್ಧಿ ಮಾಡುವಂಥ ಹಣ, ವೆಚ್ಚ ಮಾಡಿದಾಗ ಪ್ರತಿ ಚದರ ಅಡಿಗೆ ಎಷ್ಟು ಬೆಲೆ ಬೀಳುತ್ತದೆ ಎನ್ನುವುದರ ಬಗ್ಗೆ ನಮ್ಮ ಬಳಿ ತಕ್ಷಣದಲ್ಲಿ ಮಾಹಿತಿ ಇಲ್ಲ. ಏಕೆಂದರೆ ಬೇಡಿಕೆ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಉದ್ದೇಶವಿರುವುದರಿಂದ ಪ್ರಾಯಶಃ ನಾವು ಈಗಾಗಲೇ ರಾಜ್ಯದಾದ್ಯಂತ ಮಾಡಿರುವಂಥ ಕಡೆಗಳಲ್ಲಿ ಇವೊತ್ತು 120 ರಿಂದ 170 ರೂಪಾಯಿಗಳವರೆಗೆ ಬೆಲೆಯನ್ನು ಚದರ ಅಡಿಗೆ ನಿಗದಿಪಡಿಸಿದ್ದೇವೆ. ಆದುದರಿಂದ ಜಮೀನಿನ ಕಿಮ್ಮತ್ತು, ನಿರ್ಮಾಣ ಮಾಡುವಂಥ ಮನೆಯ ಕಿಮ್ಮತ್ತು, ಅದರ ಜೊತೆಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುವುದರ ಬಗ್ಗೆ ನಾವು ಲೆಕ್ಕಾಚಾರ ಹಾಕಿಯೇ ಬೇಡಿಕೆಯ ಆಧಾರದ ಮೇಲೆ ನಾವು ಆ ವರ್ತಮಾನವನ್ನು ಕೊಡುತ್ತೇವೆ. ಒಂದು ಲಕ್ಷ ರೂಪಾಯಿಯ ಮನೆಗೆ ಹದಿನೈದು ಲಕ್ಷ ರೂ ನಿಗಧಿ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಲಕ್ಷದ ರೂ.ಗಳ ಮೌಲ್ಯದ ಮನೆಗೆ ನಾವು ಒಂದು ಲಕ್ಷ ರೂಪಾಯಿ ಎಂದೇ ನಿಗದಿಪಡಿಸಬೇಕಾಗುತ್ತದೆ. ಅದಕ್ಕಿಂತ ಹೆಚ್ಚಾಗಿ, ನಿಗದಿಪಡಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ಮಾನ್ಯ ಶಾಸಕರು, ಸಾರ್ವಜನಿಕರಿಂದ ಮನೆಗಳಿಗೆ ಮತ್ತು ನಿವೇಶನಗಳಿಗೆ ಬೇಡಿಕೆ ಇದೆ ಎನ್ನುವುದರ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದಾರೆ. ಆದುದರಿಂದ ಈ ಕಾರ್ಯಕ್ರಮವನ್ನು ಅವರ ಕ್ಷೇತ್ರದಲ್ಲಿ ಜಾರಿಗೊಳಿಸುವುದಕ್ಕೆ ಎಲ್ಲಾ ರೀತಿಯ ಅಗತ್ಯ ವ್ಯವಸ್ಥೆಗಳನ್ನು ಮಾಡಲು ನಾನು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಹಮ್ಮಿಕೊಂಡಂಥ ಈ ಉದ್ದೇಶಿತ ಯೋಜನೆ ಏನಿದೆ ಇದರೊಳಗಡೆ ಎಲ್ಲಾ ಕಡೆ ಜನರು ಹಣ ತುಂಬುತ್ತಿದ್ದಾರೆ. ಈಗ ಕಳೆದ ಒಂದು ತಿಂಗಳಲ್ಲಿ ಏನಾಗಿದೆಯೆಂದರೆ ಕೆ.ಹೆಚ್.ಬಿ.ಗೆ ಬೇಕಾದಷ್ಟು ಅರ್ಜಿಗಳು ಎಲ್ಲೆಲ್ಲಿ ಬಂದಿಲ್ಲವೋ, ಅಲ್ಲೆಲ್ಲಾ ಬಂದಿರುವ ಅರ್ಜಿಗಳಲ್ಲಿ ಅರ್ಜಿದಾರರು ಹಣವನ್ನು ತುಂಬಿದ್ದಾರೆ. ಉದಾಹರಣೆಗೆ ನಮ್ಮಯಲ್ಲಾಪುರದಲ್ಲಿ ಜನರು ಹಣವನ್ನು ತುಂಬಿದ್ದಾರೆ. ಆದರೆ ಕೆ.ಹೆಚ್.ಬಿ.ಗೆ ಎಷ್ಟು ಅರ್ಜಿ ಬರಬೇಕಾಗಿತ್ತೋ ಅಷ್ಟು ಅರ್ಜಿ ಬಂದಿಲ್ಲ. ಈಗ ಹಣ ತುಂಬಿರುವ ಅರ್ಜಿದಾರರಿಗೆ ದಾಂಡೇಲಿಯಲ್ಲಿ ಮನೆ ತೆಗೆದುಕೊಳ್ಳಿ, ಹುಬ್ಬಳ್ಳಿಯಲ್ಲಿ ಮನೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಅಂದರೆ ಯಲ್ಲಾಪುರದಲ್ಲಿ ಮನೆ ಬೇಕು ಎಂದ ಅರ್ಜಿದಾರರಿಗೆ ನೀವು ಬೇರೆ ಕಡೆಯಲ್ಲಿ ಮನೆಯನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಇದು ಬಹಳ ಅವಾಸ್ತವಿಕವಾಗಿ

ಆಗುತ್ತದೆ. ಯಾರೂ ಕೂಡ ಮನೆಯನ್ನು ಬೇರೆ ಬೇರೆ ಊರಿನಲ್ಲಿ ಕಟ್ಟುವುದಕ್ಕೆ ಬಯಸುವುದಿಲ್ಲ, ಅವರ ಊರಿನಲ್ಲಿಯೇ ಮನೆಯನ್ನು ಕಟ್ಟುವುದಕ್ಕೆ ಬಯಸುತ್ತಾರೆ. ಆದುದರಿಂದ ಹಣವನ್ನು ಯಾರು ತುಂಬಿದ್ದಾರೋ ಅವರಿಗೆ ಅವರ ಊರಿನಲ್ಲಿಯೇ ನಿವೇಶನ ಕೊಡುವುದಕ್ಕೆ ಮಾನ್ಯ ಸಚಿವರು ವಿಶೇಷ ಗಮನವನ್ನು ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ.ಬಸವರಾಜ್:- ಮಾನ್ಯ ಅಧ್ಯಕ್ಷರೆ, ಈ ನೂರು ಮನೆ ಯೋಜನೆಯಡಿಯಲ್ಲಿ ಫಲಾನುಭವಿಗಳು ಹಣ ಕಟ್ಟಿ ಈಗಾಗಲೇ ಎರಡು ವರ್ಷವಾಗಿದ್ದರೂ ಕೂಡ ಸ್ಥಳವನ್ನು ಖರೀದಿ ಮಾಡುವ ವಿಚಾರದಲ್ಲಿ ಕರ್ನಾಟಕ ಗೃಹ ಮಂಡಳಿಯು ಅನಗತ್ಯ ವಿಳಂಬ ಮಾಡುತ್ತಿರುವುದರಿಂದ ಈ ಯೋಜನೆ ಎರಡು ವರ್ಷದಿಂದ ಹಾಗೇಯೇ ಇದ್ದುದ್ದರಿಂದ ಹಣ ಕಟ್ಟಿರುವ ಫಲಾನುಭವಿಗಳು ಬಹಳ ತೊಂದರೆಗೆ ಒಳಗಾಗಿದ್ದಾರೆ. ಪಿರಿಯಾಪಟ್ಟಣದಲ್ಲಿ ಸುಮಾರು 1500 ಜನರು ಹಣವನ್ನು ಕಟ್ಟಿದ್ದರೂ ಕೂಡ ಜಾಗದ ಕಿಮ್ಮತ್ತು ಏನಿದೆ ಅದನ್ನು ಕೊಟ್ಟು ಜಾಗವನ್ನು ಕೊಂಡುಕೊಳ್ಳುವ ವಿಚಾರದಲ್ಲಿ ಸರ್ಕಾರದ ಮುಂದೆ ಕಡತ ಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರು ತುರ್ತು ಎಂದು ಪರಿಗಣಿಸಿ ಬೇಗ ಜಾಗ ಖರೀದಿಸಲು ಅವಕಾಶ ಮಾಡಿಕೊಟ್ಟರೆ ಅನುಕೂಲ ಆಗುತ್ತದೆ. ಇಲ್ಲದಿದ್ದರೆ ಫಲಾನುಭವಿಗಳಿಗೆ ತೊಂದರೆ ಆಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಯಲ್ಲಾಪುರದಲ್ಲಿ ಈ ಯೋಜನೆಯನ್ನು ಜಾರಿಗೆ ತರುವುದಕ್ಕಾಗಿ ದಿನಪತ್ರಿಕೆಯೊಂದರಲ್ಲಿ ಪತ್ರಿಕಾ ಹೇಳಿಕೆಯನ್ನು ಕೊಡುವುದರ ಮುಖಾಂತರ ಫಲಾನುಭವಿಗಳನ್ನು ಅರ್ಜಿ ಸಲ್ಲಿಸಬೇಕೆಂದು ನಾವು ಕೋರಿಕೊಂಡಿದ್ದೆವು. ಆ ಪ್ರಕಾರ ಅರ್ಜಿಯನ್ನು ಸಲ್ಲಿಸಿದ್ದಾರೆ. ಆದರೆ ಮುಂಗಡ ಹಣವನ್ನು ಪಾವತಿ ಮಾಡುವುದಕ್ಕೆ ಜನರು ಹಿಂಜರಿಯುತ್ತಿದ್ದಾರೆ. ನಾವು ಒಂದು ಪಕ್ಷ ಆ ಭಾಗದಲ್ಲಿ ಅಭಿವೃದ್ಧಿ ದೃಷ್ಟಿಯಿಂದಾಗಿ ನಿವೇಶನಗಳಲ್ಲಿ ನಾವು ಮನೆಗಳನ್ನು ಕಟ್ಟಿದಾಗ ಅದನ್ನು ಕೊಳ್ಳಲು ಜನರು ಮುಂದೆ ಬರದಿದ್ದರೆ ಮಂಡಳಿಗೆ ಲುಕ್ಸಾನು ಆಗುವಂಥ ಸಾಧ್ಯತೆ ಇದೆ ಎನ್ನುವುದರ ಬಗ್ಗೆ ನಿರ್ಣಯ ಮಾಡಿದ್ದೇವೆ. ಮಾನ್ಯ ಸದಸ್ಯರು ಇವೊತ್ತು ಈ ಯೋಜನೆ ಬಗ್ಗೆ ಪ್ರಸ್ತಾವ ಮಾಡಿದ್ದಾರೆ, ತಕ್ಷಣವೇ ಇದರ ಬಗ್ಗೆ ನಾನು ಕಡತ ತರಿಸಿ ಪರಿಶೀಲಿಸಿ ಅದಕ್ಕೆ ಸೂಕ್ತವಾದಂಥ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಬಸವರಾಜ್‌ರವರು ಹೇಳಿದ ಹಾಗೆ ಪಿರಿಯಾಪಟ್ಟಣದಲ್ಲಿ ಅವರು 53 ಎಕರೆ ಜಮೀನನ್ನು ಕೊಂಡುಕೊಳ್ಳುವುದರ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ಪ್ರಸ್ತಾವನೆಯನ್ನು ನನ್ನ ಇಲಾಖೆಗೆ ಸಲ್ಲಿಸಿದ್ದಾರೆ. ಆದರೆ ಅದರಲ್ಲಿ 1500 ಜನರೇನೋ ಬೇಡಿಕೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಆದರೆ 1500 ಜನರಿಗೆ ಅಭಿವೃದ್ಧಿಯಾದಂಥ ನಿವೇಶನಗಳನ್ನು ಒದಗಿಸಿಕೊಡುವುದರ ಬಗ್ಗೆ ಹಾಗೂ ಕೊಳ್ಳುವುದರ ಬಗ್ಗೆ ಆಸಕ್ತಿ ಇದೆಯೇ ಎಂಬ ಬಗ್ಗೆ ಒಂದು ಸಮೀಕ್ಷೆಯನ್ನು ನಡೆಸಬೇಕಾಗಿದೆ. ಆ ಸಮೀಕ್ಷೆಯ ಆಧಾರವನ್ನು ಇಟ್ಟುಕೊಳ್ಳುವುದರ ಮೂಲಕ ಜನರ ಬೇಡಿಕೆ ಹೆಚ್ಚಾಗಿದೆ ಎಂದಾಗ ಮಾತ್ರ ಈ ಜಮೀನನ್ನು ಕೊಳ್ಳುವುದರ ಬಗ್ಗೆ ನಾನು ಆಲೋಚನೆಯನ್ನು ಮಾಡುತ್ತಿದ್ದೇನೆ. ಆದಕ್ಕಾಗಿ ಅವರ ಪ್ರಸ್ತಾವನೆಯನ್ನು ತಕ್ಷಣವೇ ತೀರ್ಮಾನ ಮಾಡುವುಂಥದ್ದಲ್ಲ. ಕೋಟ್ಯಾಂತರ ರೂಪಾಯಿಗಳನ್ನು ನಾವು ವೆಚ್ಚ ಮಾಡುವಂಥ ಸಂದರ್ಭದಲ್ಲಿ ಒಂದು ಕಡೆ ಸಾರ್ವಜನಿಕರಿಗೆ ಉಪಯೋಗವಾಗಬೇಕು, ಎರಡನೆಯದಾಗಿ ನಾವು ಪದೇ ಪದೇ ಹೇಳಿದ್ದೇವೆ, ನಾವು ಕಳಪೆ ಕಾಮಗಾರಿಗೆ ಅವಕಾಶ ಕೊಡುವುದಿಲ್ಲ ಎಂದು, ಉತ್ತಮವಾದಂಥ

ಮನೆಗಳನ್ನಾಗಲಿ, ನಿವೇಶನಗಳನ್ನಾಗಲಿ ನಿರ್ಮಾಣ ಮಾಡುವುದರ ಮೂಲಕ ಇದು ಸಾರ್ವಜನಿಕರಿಗೆ ಅನುಕೂಲವಾಗುವಂಥ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂಥದ್ದು, ಪ್ರಸ್ತಾವನೆ ನನ್ನ ಮುಂದೆ ಇದೆ. ಸರ್ಕಾರ ಹಾಗೂ ಇಲಾಖೆ ಇದನ್ನು ಪರಿಶೀಲಿಸುತ್ತದೆ. ಶಾಸಕರ ಜೊತೆ ಸಮಾಲೋಚನೆ ನಡೆಸಿ ಬೇಡಿಕೆ ಆಧಾರದ ಮೇಲೆ ತೀರ್ಮಾನಿಸಲಾಗುವುದು.

ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಎಂ.ಸಿ.ಎ. ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ನಿಗದಿಪಡಿಸಿರುವ ಅವಧಿ

254(2446) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಎಂ.ಸಿ.ಎ. ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಎಷ್ಟು ವರ್ಷಗಳ ಅವಧಿ ಎಂದು ನಿಗಧಿಪಡಿಸಲಾಗಿದೆ; ಎಲ್ಲಾ ವಿಶ್ವವಿದ್ಯಾಲಯಗಳಲ್ಲಿಯೂ ಸದರಿ ಕೋರ್ಸ್‌ಗೆ ಒಂದೇ ರೀತಿಯ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿದೆಯೇ; ಇಲ್ಲವಾದಲ್ಲಿ, ಕಾರಣಗಳೇನು; ಒಂದೇ ರೀತಿಯ ಪಠ್ಯಕ್ರಮಗಳನ್ನು ಅನುಸರಿಸುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಯಲ್ಲವೆ; ಹೌದಾದಲ್ಲಿ, ಆ ಕುರಿತು ಸರ್ಕಾರದ ನಿಲುವೇನು;

ಆ) ರಾಜ್ಯದ ವಿಶ್ವವಿದ್ಯಾಲಯಗಳಿಂದ ಬಿ.ಸಿ.ಎ. ಪದವಿ ಶಿಕ್ಷಣವನ್ನು ತೇರ್ಗಡೆಯಾಗಿ ಬರುವ ವಿದ್ಯಾರ್ಥಿಗಳಿಗೆ ಎಂ.ಸಿ.ಎ. ಸ್ನಾತಕೋತ್ತರ ಶಿಕ್ಷಣದಲ್ಲಿ ಅರ್ಹತೆ; ಆದ್ಯತೆ ಮೇರೆಗೆ ಪ್ರವೇಶಾವಕಾಶದಲ್ಲಿ ಮೀಸಲಾತಿಯನ್ನು ನೀಡಲು ಸರ್ಕಾರವು ಮುಂದಾಗುವುದೇ;

ಇ) ಬಿ.ಸಿ.ಎ. ಪದವಿ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಗಳಿಗೆ ಎಂ.ಸಿ.ಎ ಶಿಕ್ಷಣದಲ್ಲಿ ಸೆಮಿಸ್ಟರ್ ರಿಯಾಯಿತಿ ನೀಡಲು ಸರ್ಕಾರ ನಿರ್ಧರಿಸಿದೆಯೇ; ಹೌದಾದಲ್ಲಿ ವಿವರಗಳೇನು?

ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು):

ಅ) 3 ಶೈಕ್ಷಣಿಕ ವರ್ಷವಾಗಿರುತ್ತದೆ. ಆಯಾ ವಿಶ್ವವಿದ್ಯಾಲಯಗಳ ಪಠ್ಯಕ್ರಮ ಸಮಿತಿಗಳು ಆಯಾ ವಿಶ್ವವಿದ್ಯಾಲಯಗಳ ಪಠ್ಯಕ್ರಮವನ್ನು ತಯಾರಿಸುವುದರಿಂದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿಯೂ ಸದರಿ ಕೋರ್ಸಿಗೆ ಒಂದೇ ರೀತಿಯ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲ ಆಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ, ಒಂದೇ ರೀತಿಯ ಪಠ್ಯಕ್ರಮ ಅನುಸರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಮತ್ತು ಇ) Karnataka Selection of Candidates for admission to Master of Business administration and Master of Computer Application Courses, Rules 2000. ಅನ್ವಯ ಗಣಿತ ಶಾಸ್ತ್ರವನ್ನು ಪದವಿ ಮಟ್ಟದಲ್ಲಿ ಅಥವಾ ಪಿ.ಯು ಮಟ್ಟದಲ್ಲಿ ಒಂದು ಐಚ್ಛಿಕ / ಆಯ್ಕೆ ವಿಷಯವನ್ನಾಗಿ ವ್ಯಾಸಾಂಗ ಮಾಡಿರಬೇಕು. ಅಲ್ಲದೆ ಈ ವಿಷಯದಲ್ಲಿ ಶೇ. 50 ಅಂಕಗಳನ್ನು ಪಡೆದಿರಬೇಕು. ಆದುದರಿಂದ ಬಿಸಿಎ ವಿದ್ಯಾರ್ಥಿಗಳಿಗೂ ಈ ನಿಯಮವು ಅನ್ವಯವಾಗುತ್ತದೆ. ಅರ್ಹತೆ / ಆದ್ಯತೆಯ ಮೇಲೆ ಮೀಸಲಾತಿಗೆ ಮತ್ತು ಸೆಮಿಸ್ಟಾರ್ ರಿಯಾಯ್ತಿ ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

ಶ್ರೀ ಕೆ. ಪ್ರಭಾಕರ ಬಂಗೇರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಬೇರೆ ಬೇರೆ ಇದ್ದರೂ ಕೂಡ